ಮೈಸೂರ ಗೆಜಿಟ್ಟ

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಫಿಬ್ರವರಿ ತಾ|| 7, ಸ್ಯ 1885.

ಸೂಚನೆ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಮಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್‌ರು ವಗೈರೇರಿಂದ ಕೊಡೋಣಾದ ಇನ್ಸ್ತ್ರಾರ್‌ನಾಮೆಗಳು.

ಫಿನ್ಯಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ನಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ಯಾಂಡ್ ೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವ ರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಜರ್‌ಗಳಿಗೆ ಬಡ್ಡೀಯನ್ನು ಪಡೆದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಜರ್‌ಗಳನ್ನು ಎಕ್ಷೇನ್‌ಮೆಂಟ್ ಯಾನೇ ಷರಾ ಬಗ್ಗೆ ಇಬರಡಿ ರುಜು ಮಾಡಿರುವರ ಕ್ಷೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ತಾಲ್ಲೂಕು ಸೇವಿಂಗ್ಸ್ ಬ್ಯಾಂಕ್ ರಿಜಿಸ್ಟರ್ ಯಾ ಲೆಡ್ಜರುಗಳು ಕುರಿತು.

ಸರ್‌ಕೀಲರ್ ನಂಬರು 1,614, ಮಲ್ಲಂ 26ನೇ ಜನವರೀ 1885.

ಕಾಂಪ್ಟ್ರೋಲರ್ ಯವರು ಕೋರುವದೇನಂದರೆ, ಡಿಸ್ಟ್ರಿಕ್ಟು ಟ್ರೆಜರಿ ಆಫೀಸರುಗಳು ತಮ್ಮ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ದಾರರ ಾಜುತು 1883—84ನೇ ಸಾಲ್ ಅಖ್ಯೆರ್ ಬಾಕಿ ಪಟ್ಟಿಯ ಎಕಸ್ಟ್ರಾಕ್ಟನ್ನು, ಆಯಾ ತಾಲ್ಲೂಕು ಅಮಲ್‌ದಾರರುಗಳಿಗೆ ಕಳುಹಿಸತಕ್ಕ ನ್ದು. ಸದರೀ ಪಟ್ಟಿಯಲ್ಲಿ ಪ್ರತಿ ಡಿಪಾಜಿಟ್‌ದಾರನ ಹೆಸರು, ನಂಬರು, ಮತ್ತು ಅವನ ಲೆಕ್ಕ ಸಂಬಂಧವಾದ ತಮಾಂ ಇತರ ತಪಶೀಲುಗಳೂ ಸದರೀ ಸಾಲ್ ಅಖ್ಯೆರನಲ್ಲಿ ಅವನ ಹೆಸರಿಗೆ ಜಮೆ ಯಿಲ್ಲಿರತಕ್ಕ ಕಿಲ್ಲ್ಡ್ ಬಾಕಿ ಸುದಾ ಅಡಗಿರತಕ್ಕದ್ದು. ಐಯಿಂದಾ ಪ್ರತಿ ವೂವರುಷಸ

ಬದನ್ಹೂರ ಪಟ್ಟಗಳು, ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರ್‌ಗಳ ಸಾಲೀಯಾನಾ ಲೆಕ್ಕವು ಕಾಂಪ್ಟ್ರೋಲರವರ ಆಫೀಸಿನಲ್ಲಿ ತನಿಖೆಯಂದ ದೃಢ ಪಡಿಸಲ್ಪಟ್ಟ ತರುವಾಯದಲ್ಲಿ ಕಳುಹಿಸಲ್ಪಡತಕ್ಕದ್ದು.

ಅಮಲ್‌ದಾರರು ಇದರಡೀ ಕಂಡ ನಮೂನೆಯಲ್ಲಿ ಪ್ರತಿ ಡಿಪಾಜಿಟ್‌ದಾರನಿಗೋಸ್ಕರ ಎಂದು ರಿಜಿಸ್ಟರು ಯೂ ಲೆಡ್ಜರು ಇಡತಕ್ಕದ್ದು. ಮದಲನೇ ಕಾಲುನಲ್ಲಿ ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸಿನ ಯಕಸ್ಟಾಕ್ಟಿನಲ್ಲಿ ಕಂಡ ಕಳೆದ ಸಾಲ್ ಆಖೈರ್ ಬಾಕಿಯನ್ನು ದಾಖಲ್ಮಾಡಿ ಇತರ ಕಾಲಂಗಳಲ್ಲಿ, ತಾಲ್ಲೂಕು ಮೊಹೇವಾರಿ ರಿಜಿಸ್ಟರ್‌ನಲ್ಲಿ ಕಂಡ ಡಿಪಾಜಿಟ್‌ಗಳ ಜಮೂ ವ ಖರ್ಚು ಸುದಾ ದಾಖಲ್ಮಾಡತಕ್ಕದ್ದು.

ಡಿಪಾಜಿಟ್ಟುಗಳಿಗೆ ಸಲ್ಲಬೇಕಾದ ಬಡ್ಡಿಯು, ಈಗಿನಂತೆಯೇ ಡಿಸ್ಟ್ರಿಕ್ಟ್ ಟ್ರೆಜರಿಯಲ್ಲಿ ತಾಲ್ಲೂಕು ಮೊಹೇವಾರಿ ರಿಜಿಸ್ಟರುಗಳಿಂದ ಡಿಸ್ಟ್ರಿಕ್ಟ್‌ಮುಳಿ ಲೆಡ್ಜರುಗಳು ತಯಾರ್ಮಾಡಲ್ಪಟ್ಟು, ಲೆಕ್ಕ ಮಾಡಲ್ಪಡತಕ್ಕದ್ದು. ವಿಧಿಸಲ್ಪಟ್ಟ ಸಾಲಿಯಾನಾ ಲೆಡಿಜರಿನ ಅಸಲು, ಪ್ರತಿ ವರುಷದಲ್ಲೂ ಸಾಲ್ ಆಖೈರಾದ ಕೂಡ್ಲೆ ದೃಢಪಡಿಸಲ್ಪಡುವ ಬಗ್ಗೆ ಡಿಸ್ಟ್ರಿಕ್ಟ್ ಟ್ರೆಜರೀಗೆ ರವಾನಿಸಲ್ಪಡತಕ್ಕದ್ದು.

ನ ಮೂ ನೆ.

ತಾಲ್ಲೂಕು ಸೇವಿಂಗ್ಸ್ ಬ್ಯಾಂಕ್ ಲೆಡ್ಜರು ಸ್ಯ ನೇ ಇಸವಿ ಬಗೆ.

ಡಿಪಾಜಿಟ್ಟುದಾರನ ನಂಬರು.		ಹೆಸರು.		ಉದ್ಯೋಗ.
ಜಮೆ ವ ಖರ್ಚಿನ ತಾರೀಖು.	ಜಮೆಬಂದ ಮೊಬಲಗು.	ವಾಪಸು ಕೊಡಲ್ಪಟ್ಟ ಮೊಬಲಗು.	ವಾಪಸ್ ಕೊಡಲ್ಪಟ್ಟುತ ರುವಾಯ ಬಾಕಿ ಇರುವ ಮೊಬಲಗು.	
1884ನೇ ಇಸವಿ ಮಾರ್ಚಿ 31ರಲ್ಲು ಳಿಲ್ಲು				
ಏಪ್ರೆಲ್				
ಮೇ				
ಜೂ				
ಜುಲೈ				
ಆಗಸ್ಟ್				
ಸೆಪ್ಟಂಬರ್				
ಅಕ್ಟೋಬರ್				
ನವಂಬರ್				
ಡಿಸಂಬರ್ ..				
ಜನವರಿ 1885 ..				
ಫಿಬ್ರವರಿ				
ಮಾರ್ಚಿ				
ಜುಮ್ಲಾ				

ಹೆಚ್. ಹಡಿಸ್ಯ,
ಕಾಂಪ್ಟ್ರೋಲರ್.